# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 09/ಸಭೆ/ಪಿಆರ್/03/2020-21 ದಿನಾಂಕ : 07/11/2020

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 09 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 07/11/2020 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿ /ನೌಕರರು**

1. ಶ್ರೀ ಶಿವಕುಮಾರ್ ಮುತ್ತುಸ್ವಾಮಿ ಗೌಡರ್, ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ
2. ಶ್ರೀ ಸೋಮನಾಥ್ ಎಸ್ ಜಾಧವ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀ ಅರುಣಶ್ರೀ ಎ.ಸಿ, ಸಹಾಯಕ ಅಭಿಯಂತರರು, ವಿದ್ಯುತ್
4. ಶ್ರೀಮತಿ ಧನಲಕ್ಷ್ಮಿ, ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ
5. ಶ್ರೀ ನಂಜೇಗೌಡ, ಕಂದಾಯ ಪರಿವೀಕ್ಷಕರು
6. ಶ್ರೀ ಕೆ.ಬಿ ಬಸವರಾಜು, ಸಹಾಯಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ
7. ಕು॥ ಕಾವ್ಯ, ಸಹಾಯಕ ಅಭಿಯಂತರರು
8. ಶ್ರೀ ಭಾರ್ಗವ್, ಹಿರಿಯ ಆರೋಗ್ಯ ಪರಿವೀಕ್ಷಕರು
9. ಶ್ರೀ ಸಿದ್ದರಾಜು, ಕಿರಿಯ ಆರೋಗ್ಯ ಪರಿವೀಕ್ಷಕರು

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು**

1. ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು
2. ಸಾರ್ವಜನಿಕರು

**ಕು॥ ಕಾವ್ಯ, ಸಹಾಯಕ ಅಭಿಯಂತರರು:-** ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು, ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

**ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು**

ಎನ್.ಟಿ.ಐ ಲೇಔಟ್, ರಾಜೀವ್‌ಗಾಂಧಿನಗರದಲ್ಲಿ ಒಳಚರಂಡಿ ವ್ಯವಸ್ಥೆಗೆ ಖಾಯಂ ಆಗಿ ಪರಿಹಾರ ನೀಡುವುದು ಇಲ್ಲದೆ ಇದ್ದ ಪಕ್ಷದಲ್ಲಿ ತಾತ್ಕಾಲಿಕವಾಗಿ ಶುಚಿಗೊಳಿಸಲು ಕೋರಿದ್ದು, ಕು॥ ಧನಲಕ್ಷ್ಮಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಸದರಿ ಬಡಾವಣೆಯನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ಗೆ ಹಸ್ತಾಂತರಿಸದೆ ಇರುವುದರಿಂದ ಕಾಮಗಾರಿಯನ್ನು ನಿರ್ವಹಿಸಲು ಬರುವುದಿಲ್ಲವೆಂದು ತಿಳಿಸಿರುತ್ತಾರೆ.

Assistant Executive Engineer
Vidyaranyapura Sub Division
BBMP, Bangalore - 97

ಚಿಕ್ಕವೆಂಕಟಪ್ಪ ಲೇಔಟ್ ಕಾವೇರಿ ನೀರು ರಭಸವಾಗಿ ಬರುತ್ತಿರುವುದಿಲ್ಲ, ಟೆಲಿಕಾಂ ಬಡಾವಣೆಯ ಶೇ. 40 ರಷ್ಟು ಮನೆಗಳಿಗೆ ಕಾವೇರಿ ನೀರಿನ ಪೂರೈಕೆಯಾಗುತ್ತಿರುವುದಿಲ್ಲವೆಂದು ಕೋರಿದ್ದು ಶ್ರೀಮತಿ ಧನಲಕ್ಷ್ಮಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಸದರಿ ಬಡಾವಣೆಯಲ್ಲಿ ಒಂದು ಕಟ್ಟಡದಲ್ಲಿ 3 ಮನೆಗಳಿಗೆ ಒಂದೇ ಮೀಟರ್ ಅಳವಡಿಸಿಕೊಂಡು ನೀರು ಬಳಕೆ ಮಾಡುತ್ತಿರುವುದರಿಂದ ನೀರನ್ನು ಪೂರೈಸಲು ಕಷ್ಟವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಬಿ.ಇ.ಎಲ್ ಲೇಔಟ್ 6ನೇ ಬ್ಲಾಕ್‌ನಲ್ಲಿ ಒಳಚರಂಡಿ ಲೈನ್ ಸರಿಪಡಿಸಲು ಹಾಗೂ ತಿಂಡ್ಲು ಗ್ರಾಮ, ಸಪ್ತಗಿರಿ ಬಡಾವಣೆ, ತಿಂಡ್ಲುಯಿಂದ ವಿದ್ಯಾರಣ್ಯಪುರಕ್ಕೆ ಹೋಗುವ ರಸ್ತೆಯಲ್ಲಿ ಒಳಚರಂಡಿಯನ್ನು ಆಗಿಂದಾಗ್ಗೆ ಸ್ವಚ್ಛಪಡಿಸಲು ಕೋರಿರುವುದರಿಂದ ಕು|| ಧನಲಕ್ಷ್ಮಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

ಜೈ ಹನುಮಾನ್ ಬಡಾವಣೆಯಲ್ಲಿರುವ ಮ್ಯಾನ್ ಹೋಲ್‌ಗಳು ರಸ್ತೆ ಮಟ್ಟಕ್ಕಿಂತ ಎತ್ತರದಲ್ಲಿದ್ದು ಬೇಗ ಹಾಳಾಗುವ ಸಾದ್ಯತೆ ಇರುವುದರಿಂದ ರಸ್ತೆ ಮಟ್ಟಕ್ಕೆ ಸರಿಪಡಿಸಲು, ಕೆಂಪೇಗೌಡನಗರದಲ್ಲಿ ಒಳಚರಂಡಿ ಕಾಮಗಾರಿ ಪ್ರಾರಂಭಿಸಿರುವುದಿಲ್ಲವೆಂದು ದೂರಿರುತ್ತಾರೆ.
ಕ್ರಮ :- ಬಿ.ಡಬ್ಲ್ಯೂ.ಎಸ್.ಎಸ್.ಬಿ

ಮಾರಮ್ಮ ದೇವಸ್ಥಾನದ ಮುಖ್ಯ ರಸ್ತೆಯಲ್ಲಿ ಹಾಗೂ ಸೋಮಣ್ಣ ಗಾರ್ಡನ್ 2ನೇ ಅಡ್ಡರಸ್ತೆಯಲ್ಲಿ ಡಾಂಬರೀಕರಣ ಮಾಡಲು, ಸಪ್ತಗಿರಿ ಬಡಾವಣೆಯ 3ನೇ ಹಾಗೂ 4ನೇ ಅಡ್ಡರಸ್ತೆಯಲ್ಲಿ ಹೊಸದಾಗಿ ಕಲ್ವರ್ಟ್ ಅಳವಡಿಸಲು, ತಿಂಡ್ಲು ಮುಖ್ಯ ರಸ್ತೆಯ ಚರಂಡಿಯಲ್ಲಿ ತುಂಬಿರುವ ಹೂಳು ಮತ್ತು ಮಣ್ಣನ್ನು ತೆರವುಗೊಳಿಸಲು ಹಾಗೂ ಹೆಚ್.ಎಂ.ಟಿ ಬಡಾವಣೆಯ 13ನೇ ಮುಖ್ಯ ರಸ್ತೆಯ ಒಂದು ಕಡೆ ಚರಂಡಿ ಬ್ಲಾಕ್ ಆಗಿರುವುದರಿಂದ ಸರಿಪಡಿಸಲು ಕೋರಿದರು.
ಕ್ರಮ :- ಸ.ಕಾ.ಅ, ವಿದ್ಯಾರಣ್ಯಪುರ ಉಪವಿಭಾಗ

ವಿದ್ಯಾರಣ್ಯಪುರ ವ್ಯಾಪ್ತಿಯಲ್ಲಿ ಒಣತ್ಯಾಜ್ಯ ಸಂಗ್ರಹಣೆ ಸಮರ್ಪಕವಾಗಿ ನಿರ್ವಹಿಸುತ್ತಿರುವುದಿಲ್ಲವೆಂದು, ಒಣತ್ಯಾಜ್ಯ ಸಂಗ್ರಹಿಸಲು ಸಮಯ ನಿಗಧಿ ಪಡಿಸಲು ಹಾಗೂ ಬ್ಲಾಕ್‌ಸ್ಪಾಟ್‌ಗಳ ಸಂಖ್ಯೆ ಜಾಸ್ತಿಯಾಗುತ್ತಿರುವುದಾಗಿ ದೂರಿರುತ್ತಾರೆ.
ಕ್ರಮ : ಸ.ಕಾ.ಅ, ಎಸ್.ಡಬ್ಲ್ಯೂ.ಎಂ

ಕೆಲವೊಂದು ಬಡಾವಣೆಗಳಲ್ಲಿ ಡಸ್ಟ್‌ಬಿನ್‌ಗಳನ್ನು ಇಡಬೇಕೆಂದು ಕೋರಿದ್ದು, ನೋಡೆಲ್ ಅಧಿಕಾರಿ ರವರು ಬೇರ್ಪಡಿಸಿದ ಒಣ ತ್ಯಾಜ್ಯ ಮತ್ತು ಹಸಿ ತ್ಯಾಜ್ಯವನ್ನು ಸಂಗ್ರಹಣೆ ಮಾಡುತ್ತಿರುವುದರಿಂದ ಡಸ್ಟ್‌ಬಿನ್‌ಗಳ ಅವಶ್ಯಕತೆಯಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಕೆಲವೊಂದು ತಗ್ಗು ಪ್ರದೇಶಗಳಲ್ಲಿ ಚಿಕನ್‌ಗುನ್ಯಾ ಮತ್ತು ವೈರಾಣು ಸೋಂಕು ರಹಿತ ಸ್ಯಾನಿಟೈಜೇಷನ್ ಮಾಡಲು ಕೋರಿರುತ್ತಾರೆ.
ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು

ಕೆಲವೊಂದು ರಸ್ತೆಗಳಲ್ಲಿ ಸಿ.ಸಿ ಕ್ಯಾಮರಾ ಸರಿಯಾಗಿ ಕಾರ್ಯ ನಿರ್ವಹಿಸುತ್ತಿರುವುದಿಲ್ಲ, ರೈಲ್ವೆ ಪ್ಯಾರಲಲ್ ರಸ್ತೆ ತುಂಬಾ ಹದಗೆಟ್ಟಿದ್ದು ಸರಿಪಡಿಸಲು, ಜಿ.ಕೆ.ವಿ.ಕೆ ರಸ್ತೆಯಲ್ಲಿ ವಿದ್ಯುತ್ ದೀಪಗಳನ್ನು ದುರಸ್ಥಿಪಡಿಸಲು ಹಾಗೂ ಜಿ.ಕೆ.ವಿ.ಕೆ ರಸ್ತೆಯಲ್ಲಿ ವಿಳಾಸದ ನಾಮಫಲಕಗಳನ್ನು ಅಳವಡಿಸಲು ಕೋರಿದರು.

Assistant Executive Engineer
Vidyaranyapura Sub Division
BBMP, Bangalore - 97

**ನೋಡೆಲ್ ಅಧಿಕಾರಿ** :- ಕೋವಿಡ್ 19 ರೋಗದ ತಡೆ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕೋವಿಡ್ 19 ರೋಗದ ಸೋಂಕಿಗೆ ತುತ್ತಾದ ವ್ಯಕ್ತಿಗಳನ್ನು ಸಕಾಲದಲ್ಲಿ ಗುರುತಿಸಿ ಚಿಕಿತ್ಸೆ ನೀಡುವುದು ಹಾಗೂ ಸೋಂಕಿತ ವ್ಯಕ್ತಿಯ ಕುಟುಂಬದ ಸದಸ್ಯರು ಮತ್ತು ಆತನ ಸಹೋದ್ಯೋಗಿಗಳಿಗೆ ಸೋಂಕು ಹರಡದಂತೆ ಮುಂಜಾಗ್ರತೆ ಕ್ರಮ ವಹಿಸಲು, ರೋಗ ಹರಡುವುದನ್ನು ನಿಯಂತ್ರಿಸಲು ಹಾಗೂ ರೋಗ ವ್ಯಾಪಿಸುವ ಸರಪಳಿಯನ್ನು ಬೇರ್ಪಡಿಸಲು ಪ್ರತಿಯೊಬ್ಬ ನಾಗರೀಕರು ಕೋವಿಡ್ 19 ಪರೀಕ್ಷೆಗೆ ಒಳಪಡುವುದು ಅವಶ್ಯಕವಾಗಿರುತ್ತದೆಂದು ತಿಳಿಸಿರುತ್ತಾರೆ.

ಶ್ರೀ ಶಿವಕುಮಾರ್ ಗೌಡರ್, ನೋಡಲ್ ಅಧಿಕಾರಿ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 09, ವಿದ್ಯಾರಣ್ಯಪುರ

ನೋಡೆಲ್ ಅಧಿಕಾರಿ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು
ವಿದ್ಯಾರಣ್ಯಪುರ ಉಪವಿಭಾಗ

Assistant Executive Engineer
Vidyaranyapura Sub Division
BBMP, Bangalore-97.

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
10. ಕಛೇರಿ ಕಡತಕ್ಕೆ.